ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಒಂದು ದಿನದ ವ್ಯವಸ್ಥಿತ ಪ್ರವಾಸಗಳನ್ನು ಬೆಂಗಳೂರಿನಿಂದ ಶ್ರವಣಬೆಳಗೊಳಕ್ಕೆ ರಜಾದಿನಗಳಲ್ಲಿ ನಡೆಸುವ ಬಗ್ಗೆ.

958(1520) ಶ್ರೀ .ಜಿ. ಪುಟ್ಟಸ್ವಾಮಿಗೌಡ (ಹೊಳೆನರಸೀಪುರ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕರ್ನಾಟಕ ರಾಜ್ಯ ಸಾರಿಗೆ ಸಂಸ್ಥೆಯು ಒಂದು ದಿನದ ವ್ಯವಸ್ಥಿತ ಪ್ರವಾಸಗಳನ್ನು ಬೆಂಗಳೂರಿನಿಂದ ಶ್ರವಣಬೆಳಗೊಳ ಬೇಲೂರು ಹಳೇಬೀಡುಗಳಿಗೆ ರಜಾದಿನಗಳಲ್ಲಿ ನಡೆಸುತ್ತಿದೆಯೇ.

ಆ) ಹಾಗಿಲ್ಲದಿದ್ದರೆ ಮೇಲಿನ ಸ್ಥಳಗಳಿಗೆ ವ್ಯವಸ್ಥಿತ ಪ್ರವಾಸಗಳನ್ನು ಏರ್ಪಡಿಸಲು ಸರ್ಕಾರವುಕ್ರಮ ತೆಗೆದಿಕೊಳ್ಳುವುದೇ;

ಇ) ಹಾಗಿಲ್ಲದಿದ್ದರೆ ಕಾರಣಗಳನ್ನು ತಿಳಿಸಿರಿ?

ಶ್ರೀ.ಭೀಮಣ್ಣ ಖಂಡ್ರೆ(ಸಾರಿಗೆ ಸಚಿವರು):-

ಅ) ಇಲ್ಲ.

ಆ) ಇಲ್ಲ.

ಇ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ವ್ಯವಸ್ಥಿತ ಪ್ರವಾಸಗಳನ್ನು ಏರ್ಪಡಿಸುವ ಯೋಜನೆಯನ್ನು ಹೊಂದಿಲ್ಲ. ಅದಾಗ್ಯೂ ಅದು ಒಪ್ಪಂದದ ಮೇರೆಗೆ ವಾಹನಗಳನ್ನು ಪ್ರವಾಸಕ್ಕೆ ಹೊರಸಂಚಾರಕ್ಕೆ ಒದಗಿಸುತ್ತದೆ. ಕರ್ನಾಟಕ ರಾಜ್ಯ ಪ್ರವಾಸೋದ್ಯಮ ನಿಗಮವು ಕೂಡ ಈ ರೀತಿಯ ಪ್ರವಾಸಗಳನ್ನು ಏರ್ಪಡಿಸುತ್ತಿದೆ.

ಜಪಾನ್ ಸರ್ಕಾದ ನೆರವಿಗಾಗಿ ಕಳುಹಿಸಿರುವ ಪ್ರವಾಸೋದ್ಯಮ ಯೋಜನೆ.

960(1091) ಶ್ರೀ.ಜಿ. ಪುಟ್ಟಸ್ವಾಮಿಗೌಡ (ಹೊಳೆನರಸೀಪುರ):- ಮಾನ್ಯ ಪ್ರವಾಸೋದ್ಯಮ ಮತ್ತು ಸಾರ್ವಜನಿಕ ಕುಂದು ಕೊರತೆಗಳ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಜಪಾನ್ ಸರ್ಕಾರದ ನೆರವಿಗಾಗಿ ಕಳುಹಿಸಿರುವ ಪ್ರವಾಸೋದ್ಯಮ ಯೋಜನೆಗಳ ಸಂಖ್ಯೆ?

ಆ) ಯೋಜನೆಗಳ ಹೆಸರು ಮತ್ತು ನೆರವು ಕೋರಿರುವ ಮೊತ್ತ (ವಿವರಗಳನ್ನು ನೀಡುವುದು)?

ಇ) ಈ ಯೋಜನೆಗಳನ್ನು ಯಾವಾಗ ಕಳುಹಿಸಲಾಯಿತು?

ಈ) ಈ ಯೋಜನೆಗಳಿಗೆ ಜಪಾನ್ ಸರ್ಕಾರ ಆರ್ಥಿಕ ನೆರವನ್ನು ಮಂಜೂರು ಮಾಡಿದೆಯೆ?

ಉ) ಹಾಗಿದ್ದಲ್ಲಿ, ಆರ್ಥಿಕ ನೆರವು ಒದಗಿಸಲು ಜಪಾನ್ ಸರ್ಕಾರ ಒಪ್ಪಿರುವ ಯೋಜನೆಗಳು ಯಾವುವು?

ಊ) ಯೋಜನೆಗಳಿಗೆ ಮಂಜೂರಾತಿ ಪಡೆಯಲು: ಈವರೆಗೆ ತೆಗೆದುಕೊಂಡಿರುವ ಕ್ರಮಗಳೇನು?

ಶ್ರೀ ಪೆರಿಕಲ್.ಎಂ.ಮಲ್ಲಪ್ಪ (ಪ್ರವಾಸೋದ್ಯಮ ಮತ್ತು ಸಾರ್ವಜನಿಕ ಕುಂದು ಕೊರತೆಗಳ ರಾಜ್ಯ ಸಚಿವರು) :-

ಅ) ಒಂದು.

ಆ) ಅ) ಓ.ಇ.ಸಿ.ಎಫ್.ಹಣ ಪಡೆಯಲು ಕರ್ನಾಟಕ ಪ್ರವಾಸೋದ್ಯಮ ಅಭಿವೃದ್ಧಿ ಯೋಜನೆ.

ಆ) 110.60 ಕೋಟಿ ರೂ.

ಇ) ಈ ಯೋಜನೆಯ ವ್ಯಾಪ್ತಿಯಲ್ಲಿ ಎರಡು ವೃತ್ತಗಳು ಬರುತ್ತವೆ.

1) ಬೆಂಗಳೂರು, ಮೈಸೂರು, ಶ್ರವಣಬೆಳಗೊಳ, ಹಳೇಬೀಡು, ಬೇಲೂರು, ನಾಗರಹೊಳೆ, ಒಳಗೊಂಡ ದಕ್ಷಿಣ ವೃತ್ತ.

2) ಐಹೊಳೆ, ಬಾದಾಮಿ, ಪಟ್ಟದಕಲ್ಲು, ಬಿಜಾಪುರ, ಹಂಪಿ, ಬೀದರ್ ಮತ್ತು ಗುಲ್ಬರ್ಗಾ ಒಳಗೊಂಡ ಉತ್ತರ ವೃತ್ತ.

ಇ) 1990-91 ರಲ್ಲಿ.

ಈ) ಇಲ್ಲ.

ಉ) ಉದ್ಭವಿಸುವುದಿಲ್ಲ.

ಊ) ಈ ವಿಷಯವು ಇನ್ನೂ ಓ.ಇ.ಸಿ.ಎಫ್.ನ ಪರಿಶೀಲನೆಯಲ್ಲಿದೆ.

ನಿಗಧಿತ ದಿನಗಳಲ್ಲಿ ಮಾತ್ರ ಸರ್ಕಾರಿ ಸಭೆ ನಡೆಸಲು ಒತ್ತಾಯ.

961(1793) ಶ್ರೀ.ಮನೋಹರ್.ಯು.ಐನಾಪುರ್ (ಬಳ್ಳಾಳ್):- ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಸರ್ಕಾರಿ ಅಧಿಕಾರಿಗಳು ಇತ್ತೀಚಿನ ದಿನಗಳಲ್ಲಿ ಬಹಳಷ್ಟು ಸಭೆಗಳನ್ನು ನಡೆಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಸಾರ್ವಜನಿಕರು ಮತ್ತು ಶಾಸಕರು ದೂರವಾಣಿ ಮುಖಾಂತರ ಸರ್ಕಾರಿ ಅಧಿಕಾರಿಗಳನ್ನು ಸಂಪರ್ಕಿಸಿದಾಗ ಬರುವ ಉತ್ತರ ಅಧಿಕಾರಿ ಸಭೆಯಲ್ಲಿದ್ದಾರೆ ಅಥವಾ